# ಮಧಾಪರ ಶಿಬಿರದ ಮಧುರ ನೆನಪು




ಮಂಗಳ ಮುಖಿಯರ ಏಳು ಜನರ ತಂಡ ನಮ್ಮಲ್ಲಿಗೆ ಬಂದು ಹಣ ಕೇಳಿದರು. ನಾನು ಎಲ್ಲಾ ಕಿಸೆಯನ್ನು ತಡಕಾಡಿ ಚಿಲ್ಲರೆ ನಾಣ್ಯಗಳನ್ನು ಒಟ್ಟು ಮಾಡಿ ನೀಡಿದ್ದೆ ತಡ, ಗುಜರಾತಿ ಭಾಷೆಯಲ್ಲಿ ಜೋರಾಗಿ ಬೈಯ್ಯುತ್ತಾ ಸೀರೆ ಎತ್ತಿ ಏನೇನೋ ಮಾಡಿ ನನ್ನ ಮುಖದ ಮೇಲೆ ಕೊಟ್ಟ ನಾಣ್ಯವನೆಲ್ಲಾ ಜೋರಾಗಿ ಒಗೆದು ಮುಂದೆ ಸಾಗಿದರು. ನಾವೆಲ್ಲಾ ಒಂದು ಕ್ಷಣ ದಂಗಾಗಿ ಹೋದೆವು. ಅವರು ಬೈಯ್ಯುವಾಗ ಅವರ ಆಂಗಿಕ ಭಾಷೆ ಗಮನಿಸಿದ ನಮಗೆ ಗುಜರಾತಿ ಬಾರದೆ ಇದ್ದದ್ದು ಒಳ್ಳೆಯದೇ ಆಯಿತು ಎಂದೆನಿಸಿತು!

■ **ಬೀರಣ್ಣ ನಾಯಕ ಮೊಗಟಾ**

ದೇಶವನ್ನೇ ಬೆಚ್ಚಿ ಬೀಳಿಸಿದ ಗುಜರಾತಿನ ಭೂಕಂಪ ನಡೆದು ವರ್ಷಗಳೇ ಗತಿಸಿವೆ. ಆದರೂ ಅಲ್ಲಲ್ಲಿ ಸಣ್ಣ ಪುಟ್ಟ ಭೂಕಂಪಗಳು ನಡೆಯುತ್ತಲೇ ಇದ್ದವು. ಗುಜರಾತಿನ ಕಛ್ ಜಿಲ್ಲೆಯ ಮಧಾಪರ ಕೂಡ ಭೂಕಂಪದಿಂದ ನಲುಗಿತ್ತು. ಏಷ್ಯಾ ಖಂಡದಲ್ಲಿಯೇ ಶ್ರೀಮಂತ ಊರಾದ ಮಧಾಪರದಲ್ಲಿ ಭಾರತ ಸರಕಾರ ಹಾಗೂ ಯುವಜನ ಸೇವೆ ಮತ್ತು ಕ್ರೀಡಾ ಮಂತ್ರಾಲಯ ನವದೆಹಲಿ ಇವುಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ (ಎನ್.ಎಸ್.ಎಸ್) ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಏಳು ದಿನಗಳ ಕಾಲ (2005ರ ಅಕ್ಟೋಬರ್ 11ರಿಂದ 17) ನಡೆದಿತ್ತು. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ವೈ.ಟಿ.ಎಸ್.ಎಸ್. ಕಾಲೇಜಿನ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾದ ನಾನು ಹಾಗೂ ನಮ್ಮ ಘಟಕದ ಹತ್ತು ಎನ್.ಎಸ್.ಎಸ್. ಸ್ವಯಂಸೇವಕರಾದ ನಾಗೇಂದ್ರ ಕುಣಬಿ, ಬಾಲಕೃಷ್ಣ ಗೊಂದ್ಲಿ, ರಾಘವೇಂದ್ರ ಪಟಗಾರ, ಸಂತೋಷ ಘೋರ್ಪಡೆ, ಜೀವನ ನಾಯ್ಕ, ಸಂಧ್ಯಾ ಕುಲಕರ್ಣಿ, ಸುವರ್ಣಾ ಗಾಂವಕರ, ಸಮೃದ್ಧಿ ನಾಯ್ಕ, ಸರೋಜಾ ದಾನಗೇರಿ ಮತ್ತು ಮಧುರಾ ಗಾಂವಕರ ಕರ್ನಾಟಕದ ಪ್ರತಿನಿಧಿಗಳಾಗಿ ಆ ಶಿಬಿರದಲ್ಲಿ ಭಾಗವಹಿಸಲು ಆಯ್ಕೆ ಆದೆವು. ಹೋಗಿ ಬರುವ ದಿನಗಳನೆಲ್ಲಾ ಸೇರಿಸಿ ಹದಿನಾಲ್ಕು ದಿನಗಳ ಆ ಶಿಬಿರದ ಸಿಹಿ ಸಿಹಿ ನೆನಪುಗಳನ್ನು ಮರೆಯಲು ಸಾಧ್ಯವೇ ಇಲ್ಲ.

ಹೋಗುವಾಗ ರೈಲಿನಲ್ಲಿ ಮಂಗಳ ಮುಖಿಯರ ಜೊತೆ ನಡೆದ ವಿನೂತನ ಘಟನೆ, ಅನ್ನ ರಹಿತ ಊಟದ ಜೊತೆ ಅನ್ನ ಸಿಕ್ಕ ದಿನದ ಸಂಭ್ರಮ, ಅಲ್ಲಿಯೇ ದಾಂಡಿಯಾ ಕಲಿತು ಸಮೃದ್ಧಿ ಬಹುಮಾನ ಪಡೆದ ಆ ಘಳಿಗೆ, ಯಕ್ಷಗಾನದಲ್ಲಿ ಮಿಂಚಿದ ಆ ಕ್ಷಣ, ಎಲ್ಲ ಸ್ವಯಂಸೇವಕರು ಸೇರಿ ಭಾವೈಕ್ಯತಾ ನೃತ್ಯ ಮಾಡಿ ಚಪ್ಪಾಳೆ ಗಿಟ್ಟಿಸಿದ ಆ ಘಳಿಗೆ, ಎಲ್ಲಾ ರಾಜ್ಯದವರಿಗಿಂತ ಅತಿ ಹೆಚ್ಚು ಬಹುಮಾನ ಗಳಿಸಿದ ಆ ಸಂಭ್ರಮ, ಅರ್ಧಗಂಟೆ ನಾನು ಮಾಡಿದ ಗುಜರಾತಿ ಭಾಷಣ, ನಮ್ಮ ಗುಂಪಿನ ಸರೋಜಾ ಎಂದೇ ತಿಳಿದು ರಾಜಸ್ತಾನದ ಸ್ವಯಂ ಸೇವಕಿಗೆ ಗದರಿಸಿದ ನನ್ನ ದಡ್ಡತನ, ಕುಣಬಿ ನೃತ್ಯ ಇವನ್ನೆಲ್ಲ ಹೇಗೆ ಮರೆಯಲಾದೀತು?

ರಾತ್ರಿ ಏಳು ಗಂಟೆಯಾಗಿರಬಹುದು. ರೈಲು ಗುಜರಾತ್ ರಾಜ್ಯವನ್ನು ಪ್ರವೇಶ ಮಾಡಿದೆ. ನನ್ನ ಬಲಕ್ಕೆ ಸುವರ್ಣಾ ಗಾಂವಕರ, ಎಡಕ್ಕೆ ಸಮೃದ್ಧಿ ನಾಯ್ಕ ಎದುರಿಗೆ ಮಧುರಾ ಗಾಂವಕರ, ಸರೋಜಾ ದಾನಗೇರಿ ಮತ್ತು ಸಂಧ್ಯಾ ಕುಲಕರ್ಣಿ ಆಸೀನರಾಗಿದ್ದರು. ಏನೋ ಹರಟುತ್ತ ಬಹಳ ಖುಷಿಯಲ್ಲಿರುವ ಕ್ಷಣ. ಮಂಗಳ ಮುಖಿಯರ ಏಳು ಜನರ ತಂಡ ನಮ್ಮಲ್ಲಿಗೆ ಬಂದು ಹಣ ಕೇಳಿದರು. ನಾನು ಎಲ್ಲಾ ಕಿಸೆಯನ್ನು ತಡಕಾಡಿ ಚಿಲ್ಲರೆ ನಾಣ್ಯಗಳನ್ನು ಒಟ್ಟು ಮಾಡಿ ನೀಡಿದ್ದೆ ತಡ, ಗುಜರಾತಿ ಭಾಷೆಯಲ್ಲಿ ಜೋರಾಗಿ ಬೈಯ್ಯುತ್ತಾ ಸೀರೆ ಎತ್ತಿ ಏನೇನೋ ಮಾಡಿ ನನ್ನ ಮುಖದ ಮೇಲೆ ಕೊಟ್ಟ ನಾಣ್ಯವನೆಲ್ಲಾ ಜೋರಾಗಿ ಒಗೆದು ಮುಂದೆ ಸಾಗಿದರು. ನಾವೆಲ್ಲಾ ಒಂದು ಕ್ಷಣ ದಂಗಾಗಿ ಹೋದೆವು. ಅವರು ಬೈಯ್ಯುವಾಗ ಅವರ ಆಂಗಿಕ ಭಾಷೆ ಗಮನಿಸಿದ ನಮಗೆ ಗುಜರಾತಿ ಬಾರದೆ ಇದ್ದದ್ದು ಒಳ್ಳೆಯದೇ ಆಯಿತು ಎಂದೆನಿಸಿತು!

ದಾಂಡಿಯಾ ನೃತ್ಯ ನಮಗೆ ಹೊಸತು. ಅಲ್ಲಿ ದಾಂಡಿಯಾ ಮುಕ್ತ ಸ್ಪರ್ಧೆ ಇತ್ತು. ಸಮೃದ್ಧಿ ನಾಯ್ಕ ಅಲ್ಲಿಯೆ ದಾಂಡಿಯಾ ನೃತ್ಯ ಕಲಿತು ಬಹುಮಾನ ಗಿಟ್ಟಿಸಿದಾಗ ಖುಷಿಯೋ ಖುಷಿ. ಅಲ್ಲಿ ಎಲ್ಲರ ಜನಮನ ಗೆದ್ದದ್ದು ನಮ್ಮ ಯಕ್ಷಗಾನ. ನಮ್ಮ ಯಕ್ಷಗಾನದ ವಿಶೇಷತೆಯೆಂದರೆ ಮಧುರಾ ಗಾಂವಕರ ಪುರುಷ ಪಾತ್ರದಲ್ಲಿ ಹಾಗೂ ಜೀವನ ನಾಯ್ಕ ಸ್ತ್ರೀ ಪಾತ್ರದಲ್ಲಿ ಮಿಂಚಿದ್ದು. ನಮ್ಮ ಯಕ್ಷಗಾನದ ವೇಷಭೂಷಣ ಹಾಗೂ ನೃತ್ಯ ಅಲ್ಲಿಯ ಪ್ರೇಕ್ಷಕರಿಗೆ ತುಂಬಾ ಹಿಡಿಸಿತು. ಸಂಧ್ಯಾ ಕುಲಕರ್ಣಿ ನಿರ್ದೇಶನದಲ್ಲಿ ಎಲ್ಲ ಸ್ವಯಂಸೇವಕರು ಸೇರಿ ಮಾಡಿದ ಭಾವೈಕ್ಯತಾ ನೃತ್ಯ, ನಾಗೇಂದ್ರ ಕುಣಬಿ ನಿರ್ದೇಶನದಲ್ಲಿಯ ಕುಣಬಿ ನೃತ್ಯ, ಸರೋಜಾ ದಾನಗೇರಿಯ ಪರಿಸರ ಗೀತೆ, ಸಂತೋಷ ಘೋರ್ಪಡೆಯ ಶಾಯರಿ ಅಲ್ಲಿಯ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು.

ಶಿಬಿರದ ಒಂದು ದಿನ ಪ್ರವಾಸ. ಪ್ರವಾಸಕ್ಕೆ ವಾಹನಗಳು ನಿಗದಿಯಾಗಿದ್ದವು. ಎಲ್ಲರೂ ಅವರವರ ರಾಜ್ಯದ ಸಾಂಪ್ರದಾಯಕ ಉಡುಪಿನಲ್ಲಿಯೇ ಹೋಗಬೇಕಾಗಿತ್ತು. ನಾನು ಹಾಗೂ ನಮ್ಮ ಐದು ಹುಡುಗರು ನಮಗೆ ನಿಗದಿಯಾದ ವಾಹನದ ಬಳಿಯಲ್ಲಿ ಇದ್ದೆವು. ಆದರೆ ಹುಡುಗಿಯರು ಇನ್ನು ಬರಬೇಕಾಗಿತ್ತು. ಸಂಘಟಕರು ಗಡಿಬಿಡಿ ಮಾಡುತ್ತಿದ್ದರು. ನಾನು ಹುಡುಗಿಯರು ಇರುವಲ್ಲಿ ಹೋಗಿ ಸರೋಜಾ ದಾನಗೇರಿಯನ್ನು ಕಂಡು ದೂರದಿಂದಲೇ ಗದರಿಸಿ ಬೇಗ ಬರುವಂತೆ ತಿಳಿಸಿದೆ. ಆದರೆ ಆ ಹುಡುಗಿ ಸರೋಜಾ ದಾನಗೇರಿ ಆಗಿರದೆ ರಾಜಸ್ತಾನದ ಸ್ವಯಂಸೇವಕಿ ಆಗಿದ್ದಳು! ಗಡಿಬಿಡಿಯಲ್ಲಿ ನಮ್ಮ ಸ್ವಯಂಸೇವಕಿಯರು ಸೀರೆ ಉಟ್ಟುಕೊಂಡು ಸಿದ್ಧರಾಗಿ ಬಂದರು.

ಅಂದು ನನ್ನ ಜೊತೆಗಿದ್ದ ಸ್ವಯಂಸೇವಕರು ಇಂದು ದೇಶ, ವಿದೇಶಗಳಿಗೂ ಹೋಗಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಅಂದು ಮಧಾಪರದಲ್ಲಿ ತೆಗೆಸಿಕೊಂಡ ಫೋಟೊಗಳು ಮಾತ್ರ ಮಧಾಪರ ಶಿಬಿರದ ಮಧುರ, ಸಿಹಿ ಸಿಹಿ ನೆನಪುಗಳನ್ನು ಮತ್ತೆ ಮತ್ತೆ ಮರುಕಳಿಸುವಂತೆ ಮಾಡುತ್ತದೆ. ■